**<u>ದಿನಾಂಕಃ 05.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಎದುದಾರರ ಪರ ಮಾನ್ಯ ವಕೀಲರಿಂದ.</u>

ನಾನು 2003ರಿಂದ ಬಿ.ಎಂ.ಟಿ.ಸಿ ಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಸಾಮಾನ್ಯ ಪಾಳಿಯಲ್ಲಿ ಹೆಚ್ಚಿ ನ ಕೆಲಸ ಮಾಡುತ್ತಿದ್ದು, ಅದರ ಅವಧಿ ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಆಗಿರುತ್ತದೆ. ದಿನಾಂಕ 30.09.2019ರಂದು ಘಟಕ-26 ರ ಆವರಣದಲ್ಲಿ ಬೆಳಿಗ್ಗೆ 8.30-9 ಗಂಟೆಯ ಸಮಯದಲ್ಲಿ ಅಪಘಾತ ಸಂಭವಿಸಿರುತ್ತದೆ. ಅಪಘಾತವಾದ ಸಂದರ್ಭದಲ್ಲಿ ನನಗೆ ನಿವ್ವಳ ವೇತನ ರೂ.23,000/- ಬರುತ್ತಿತ್ತು. ಆಗಸ್ಟ್ 2019 ರ ವೇತನ ಪಟ್ಟಿಯಲ್ಲಿ ನಾನು ಹೇಳಿರುವ ಮೊತ್ತಕ್ಕಿಂತ ಹೆಚ್ಚಿ ನ ಮೊತ್ತ ಸಂಬಳವಾಗಿ ಪಡೆದ ಬಗ್ಗೆ ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಸಂದರ್ಭದಲ್ಲಿ ಸಂಬಳ ಬಾಕಿ ಮೊತ್ತ ಸಹ ಸೇರ್ಪಡೆಗೊಂಡಿತ್ತು ಎಂದು ನುಡಿಯುತ್ತಾರೆ. ನನಗೆ ಕಡಿತಗಳನ್ನು ಕಳೆದ ನಂತರ ರೂ.22,000/- ವೇತನ ಬರುತ್ತಿತ್ತು. ಪಿ.ಎಫ್ ಆಧಾರದ ಮೇರೆಗೆ ಸಾಲ ಪಡೆದಿರುತ್ತೇನೆ, ಆದರೆ ಸಾಲವನ್ನು ಪಡೆದ ವರ್ಷ ನೆನಪಿಲ್ಲ.

ನಾನು ಈಗಲೂ ಸಹ ಬಿ.ಎಂ.ಟಿ.ಸಿ ಯಲ್ಲಿ ಪಾರುಪತ್ಯಗಾರನಾಗಿ ಕೆಲಸ ಮಾಡುತ್ತಿದ್ದು, ಒಟ್ಟು ಸಂಬಳ ರೂ.65,000/- ಬರುತ್ತಿದೆ. ನನಗೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 2019ರಲ್ಲಿ ನಾನು ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದೆ. 2022ರಲ್ಲಿ ನಾನು ಹುದ್ದೆ ಬದಲಾವಣೆ ಕೋರಿ ಅರ್ಜಿ ನೀಡಿರುತ್ತೇನೆ. ಸದರಿ ಅರ್ಜಿಯಲ್ಲಿ ನಾನು ಇದ್ದ ಹುದ್ದೆಯ ಸಮಾನಕ್ಕೆ ಬೇರೆ ಹುದ್ದೆ ನೀಡುವಂತೆ ಕೋರಿದ್ದೆನು. ನನ್ನ ಅರ್ಜಿಯಲ್ಲಿ ಕೋರಿರುವ ಪರಿಹಾರವನ್ನು ಎದುರುದಾರರು ನೀಡಿಲ್ಲ. ಸೇವಾ ಜೇಷ್ಠತೆಯ ಆಧಾರದ ಮೇರೆಗೆ ನನಗೆ ಪಾರುಪತ್ಯ ಹುದ್ದೆ ನೀಡಿರುತ್ತಾರೆ. ವೈದ್ಯಕೀಯ ವೆಚ್ಚವನ್ನು ನಾನು ಹೇಳುವಷ್ಟು ಹಣವನ್ನು ವ್ಯಯಿಸಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ವೆಚ್ಚಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು

ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾಖಲಾತಿಗಳನ್ನು ವೈದ್ಯಕೀಯ ವೆಚ್ಚದ ಮರುಪಾವತಿ ಕೋರಿ ಸಂಸ್ಥೆಗೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ವೈದ್ಯಕೀಯ ವೆಚ್ಚ ಸಂಪೂರ್ಣವಾಗಿ ಮರುಪಾವತಿಯಾಗಿರುತ್ತದೆ.

ಅಪಘಾತವಾದ ನಂತರ 4 ತಿಂಗಳು ನಾನು ರಜೆ ಪಡೆದಿದ್ದೆ. ಆ ಸಮಯದಲ್ಲೂ ನನಗೆ ಸಂಬಳ ಬಂದಿರುತ್ತದೆ ಎಂದರೆ ಸರಿ. ಆದ ಕಾರಣ ನನ್ನ ಚಿಕಿತ್ಸಾ ಸಮಯದಲ್ಲಿ ಯಾವುದೇ ಸಂಬಳದ ನಷ್ಟ ಆಗಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಎದುರುದಾರರ ವಿರುದ್ದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಪರಿಣಾಮ ನನಗೆ ಯಾವುದೇ ರೀತಿಯ ಆರ್ಥಿಕ ಮತ್ತು ದೈಹಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**